

# ಕತ್ತೆ ಹಾಲು ಹಿಂಡಿದ್ರೆ ಸಿಗೋ ಬೆಲೆ ಕುದುರೆ ಬಾಲ ಹಿಡಿದ್ರೆ ಸಿಗುತ್ತಾ?

■ ವಸುಂಧರಾ ಕದಲೂರು

**ಕತ್ತೆಯನ್ನು ದಡ್ಡತನಕ್ಕೆ, ಆಲಸ್ಯಕ್ಕೆ ಉದಾಹರಣೆಯಾಗಿ ಬಳಸುತ್ತೇವೆ. ಕತ್ತೆಯ ಮೌಲ್ಯ ಹಾಗೂ ಮಹತ್ವವನ್ನು ನಾವು ಸರಿಯಾಗಿ ಅರ್ಥೈಸಿಕೊಂಡಿಲ್ಲ. ಈ ಬರಹ ಓದಿದ ನಂತರ, ಕತ್ತೆಯ ಬಗೆಗಿನ ನಿಮ್ಮ ಪೂರ್ವಗ್ರಹ ಬದಲಾಗದೆ ಹೋದರೆ, ಕತ್ತೆಯ ಮೇಲಾಣೆ, ಆದರ ಬಾಲದ ಮೇಲಾಣೆ!**

ಕತ್ತೆ ಹಾಲು, ಕುದುರೆ ಬಾಲ – ಎತ್ತಣಿಂದೆತ್ತ ಸಂಬಂಧವಯ್ಯಾ! ಎನ್ನಬೇಡಿ. ಕತ್ತೆ ಹಾಗೂ ಕುದುರೆ ಇವೆರಡೂ 'ಸಸ್ತನಿ'ಗಳ ಗುಂಪಿನ, ಪಸೆರಿಸ್ಸೊಡಾಕ್ಟೈಲ ಗಣದ, ಕುದುರೆ ಮತ್ತು ಜೀಬ್ರಾ ಪ್ರಾಣಿಗಳನ್ನು ಒಳಗೊಂಡ ಎಕ್ವಿಡೀ ಕುಟುಂಬಕ್ಕೆ ಸೇರಿದ ಪ್ರಾಣಿ. ಕುದುರೆ ಮತ್ತು ಜೀಬ್ರಾಗಳಂತೆಯೇ ಕತ್ತೆ 'ಈಕ್ವಸ್' ಎನ್ನುವ ಜಾತಿಗೆ ಸೇರಿದೆ ಎಂದು ಗೂಗಲ್ ಗುರು ಪಾಠ ಮಾಡುವುದರಿಂದ, ಈ ಪ್ರಾಣಿಗಳಿಗೆ ಇರುವ ಸಂಬಂಧ ವೈಜ್ಞಾನಿಕವಾಗಿಯೂ ಸಾಬೀತಾಗಿದೆ. ಹಾಗಾಗಿ ಕತ್ತೆಹಾಲಿಗೂ ಕುದುರೆಬಾಲಕ್ಕೂ ಹೇಗೋ ನಂಟನ್ನು ಸದ್ಯಕ್ಕೆ ನಂಬಿಕೊಳ್ಳೋಣ. ನಂಬದಿದ್ದರೆ, 'ಕತ್ತೆ ಬಾಲ, ಕುದುರೆ ಜುಟ್ಟು' ಎಂದು ಅಸಡ್ಡಾಳದ ಮಾತು ಹೇಳಿ 'ಠೂ' ಬಿಡುವಂತಿಲ್ಲ. ಏಕೆಂದರೆ, ಜಾಗತಿಕ ಮಾರುಕಟ್ಟೆಯಲ್ಲಿ ಕತ್ತೆಹಾಲಿನ ಬೆಲೆ ಗಗನಗಾಮಿ ಆಗಿರುವುದರಿಂದ ಹಾಗೂ ಸೃಷ್ಟಿಯಲ್ಲಿ ಯಾರೂ ಅಮುಖ್ಯರಲ್ಲದ್ದರಿಂದ ಕತ್ತೆಯನ್ನು ಕೇವಲವಾಗಿ ಕಾಣುವಂತಿಲ್ಲ.

'ಕತ್ತೆಯಾ ಮರಿ ಚೆಂದ...' ಎಂಬ ಜನಪದರ ನುಡಿ ಅದರ ಸೌಂದರ್ಯಕ್ಕೆ ನೀಡಿದ ತಾರೀಫಿನಂತಿಲ್ಲವೇ? ಹರಯದಲ್ಲಿ ಕತ್ತೆಯೂ ಅಪರೂಪದ ಸೌಂದರ್ಯವತಿ ಎಂಬ ಮಾತೂ ಇದೆಯಲ್ಲ! ಸೌಂದರ್ಯದ ಮಾತು ಬಿಡಿ, ಸೌಂದರ್ಯದ ಅಳತೆಗೋಲು ಯಾವುದು? ಮಾನದಂಡಗಳೇನು? ಎಂದು ಪ್ರಶ್ನೆ ಶುರುವಾದರೆ, ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯ ಮಿಗಿಲೆಂಬ ಷರಾ ಬರೆಯಬೇಕಾಗುತ್ತದೆ. ಆ ಬಗ್ಗೆ ಚರ್ಚೆ ಈಗ ಬೇಡ. ಕತ್ತೆ ಹಾಲಿನಿಂದ ಚರ್ಮದ ಕಾಂತಿ ಹೆಚ್ಚಾಗುತ್ತದೆ ಎಂಬ ಪ್ರತೀತಿ ಇದೆ. ಹೌದು, ಸೌಂದರ್ಯದ ಖನಿಯಾಗಿದ್ದ 'ಕ್ಲಿಯೋಪಾತ್ರ'ಳು ಕತ್ತೆ ಹಾಲಿಂದಲೇ ಸ್ನಾನ ಮಾಡುತ್ತಿದ್ದ ನಂಬುಗೆಯಿಂದಾಗಿ ಅದರ ಹಾಲಿಗೆ ಅಷ್ಟು ಬೆಲೆ ಏರಿರಬಹುದೇ ಎಂದು ಸಂದೇಹಪಟ್ಟರೆ, ಕತ್ತೆಹಾಲಿಗೆ ಮಾರುಕಟ್ಟೆ ಮೌಲ್ಯ ಲೀಟರಿಗೆ ಸಾವಿರಾರು ರೂಪಾಯಿ ಇರುವುದರಿಂದ ಬಹುಶಃ ಹಲವು ವೈಜ್ಞಾನಿಕ ಸಂಶೋಧನೆಗಳು ಕತ್ತೆ ಹಾಲು ಚರ್ಮದ ಕಾಂತಿ ಹೆಚ್ಚಿಸುವ ಗುಣ ಹೊಂದಿರುವುದನ್ನು ದೃಢಪಡಿಸಿರಬಹುದು. ಈ ಕಾರಣದಿಂದ ಕತ್ತೆ ಮೇಯಿಸೋನು ಕುಬೇರನೇ ಆಗಬಹುದು. ಹಾಗಾಗಿ, 'ಹೋಗಿ ಕತ್ತೆ ಮೇಯಿಸು' ಎಂಬುದು ನಿಷ್ಪ್ರಯೋಜಕರಿಗೆ ಹೇಳುವ ಮಾತೆಂದು ಇನ್ನುಮುಂದೆ ಪರಿಭಾವಿಸುವಂತಿಲ್ಲ. 'ಕತ್ತೆ ಹಾಲು ಹಿಂಡಿದರೆ ಸಿಕ್ಕೋ ಬೆಲೆ, ಕುದುರೆ ಬಾಲ ಹಿಡಿದ್ರೆ ಸಿಗುತ್ತಾ!?' ಅಂತ ಹೊಸ ಗಾದೆಯನ್ನೇ ಟಂಕಿಸಬಹುದು.

ಪರಿಶುದ್ಧ ಹಾಲಿನಿಂದ ಮಾಡಿದ ಸೋಪು, ಶ್ಯಾಂಪು, ಮಾಯಿಶ್ಚರೈಸರ್ ಕ್ರೀಂ, ಎಣ್ಣೆ – ಹೀಗೆ ತಾರೆಯರ ಸೌಂದರ್ಯ ಹೆಚ್ಚಿಸುವ ಪ್ರಸಾದನ ಸಾಮಾಗ್ರಿಗಳ ಜಾಹೀರಾತಿನ ಬಹುದೊಡ್ಡ ಪಟ್ಟಿಯೇ ಇರುವುದರಿಂದ ಹಾಲು ಒಂದು ನೈಸರ್ಗಿಕವಾಗಿ ಬಳಸಲಾಗುವ ಪ್ರಮುಖ ಸೌಂದರ್ಯ ಸಾಧನವೆನ್ನಬಹುದು. ಮಹಾಕಾಯ ಗೊಮ್ಮಟನಿಗೆ ಮಸ್ತಕಾಭಿಷೇಕ ಮಾಡುವಾಗ, ಸುರಿಯುವ ಲೀಟರ್‌ಗಟ್ಟಲೆ ಹಾಲು, ಚಂದನ, ಕೇಸರಿ, ಮೊಸರು, ಜೇನುತುಪ್ಪ ಮೊದಲಾದವು ಆ ಬೃಹತ್ ಶಿಲೆಯನ್ನು ಉರಿಬಿಸಿಲು, ಮೊರೆವ ಗಾಳಿ, ಸುರಿವ ಮಳೆಯೆಂಬ

